# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2060 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ.ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 25.03.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ಭೂದಾಖಲೆಯಲ್ಲಿ ನಡೆದಿರುವ ಅನಿಯಮಿತತೆಗಳ ಕುರಿತ ಪ್ರಕರಣಗಳು ಬೆಳಕಿಗೆ ಬಂದಿವೆಯೇ; ಬಂದಿದ್ದಲ್ಲಿ ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಇದರಲ್ಲಿ ಯಾವ ಯಾವ ಅಧಿಕಾರಿಗಳು ಭಾಗಿಯಾಗಿದ್ದಾರೆ ಮತ್ತು ಈ ಅಧಿಕಾರಿಗಳ ವಿರುದ್ಧ ಸರ್ಕಾರದಿಂದ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; | ರಾಜ್ಯದಲ್ಲಿ ಮೂಲ ಸರ್ವೆ, ರೀಸರ್ವೆ, ಮತ್ತು ಹಿಸ್ಸಾ ಸರ್ವೆ ಮಾಡುವ ಮೂಲಕ ರಾಜ್ಯದ ಎಲ್ಲಾ ಕೃಷಿ (ಹಿಡುವಳಿ) ಜಮೀನುಗಳನ್ನು ಅಳತೆ ಮಾಡಿ, ಸಂಬಂಧಿಸಿದ ಭೂದಾಖಲೆಗಳನ್ನು ರಚಿಸಿ ನಿರ್ವಹಿಸುವ ಸಂದರ್ಭದಲ್ಲಿ ಹಿಂದೆಯೇ ಕೆಲವೊಂದು ಲೋಪಗಳಾಗಿರುವುದು ಕಂಡು ಬಂದಿರುತ್ತದೆ. ಈ ರೀತಿ ತಪ್ಪುಗಳಾಗಿದ್ದಲ್ಲಿ ಪ್ರಸ್ತುತ ಅವುಗಳನ್ನು ನಿಯಮಾನುಸಾರ ತಿದ್ದುಪಡಿಗೆ ಒಳಪಡಿಸಿ, ಲೋಪಗಳನ್ನು ಸರಿಪಡಿಸಿ ನಿರ್ವಹಿಸಲಾಗುತ್ತದೆ.<br><br>ಇದಲ್ಲದೇ, ಪ್ರಸ್ತುತ ನಿರ್ವಹಿಸುತ್ತಿರುವ ಅಳತೆ ಕೆಲಸಗಳ ಬಾಬ್ತು ಸಹ ಭೂಮಾಪಕರ ಹಂತದಲ್ಲಿ ಹಾಗೂ ತಪಾಸಕರು, ಅಧೀಕ್ಷಕರು (ತಾಂತ್ರಿಕ), ಭೂದಾಖಲೆಗಳ ಸಹಾಯಕ ನಿರ್ದೇಶಕರು, ಭೂದಾಖಲೆಗಳ ಉಪ ನಿರ್ದೇಶಕರು ಹಾಗೂ ಭೂದಾಖಲೆಗಳ ಜಂಟಿ ನಿರ್ದೇಶಕರ ಹಂತದಲ್ಲಿ ಕೆಲವೊಂದು ಪ್ರಕರಣಗಳ ಬಾಬ್ತು ಹಿಡುವಳಿದಾರರಿಂದ ಆಕ್ಷೇಪಣೆ ಬಂದ ಮೇರೆಗೆ ಪರಿಶೀಲಿಸಿದ ಸಂದರ್ಭದಲ್ಲಿ ಲೋಪಗಳಾಗಿರುವುದು ಕಂಡು ಬಂದಿರುತ್ತದೆ. ಆಯಾಯ ಪ್ರಕರಣಕ್ಕೆ ಸಂಬಂದಿಸಿದಂತೆ ಆದ ಕರ್ತವ್ಯಲೋಪಗಳ ಬಗ್ಗೆ ಆಗಿಂದಾಗ್ಗೆ ಶಿಸ್ತುಕ್ರಮಕ್ಕೆ ಒಳಪಡಿಸಲಾಗುತ್ತಿದೆ.<br><br>ಹಕ್ಕುದಾರರ ಅನುಭವ ಮತ್ತು ಅವರ ಹಕ್ಕು ದಾಖಲೆಗಳಲ್ಲಿ ವ್ಯತ್ಯಾಸವಿದ್ದಲ್ಲಿ ಗಡಿ ಮತ್ತು ವಿಸ್ತೀರ್ಣಗಳು ತಾಳೆಯಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಭೂಮಾಪನ ಇಲಾಖೆಯ ವಿವಿಧ ಹಂತದ ಅಧಿಕಾರಿಗಳ ಬಳಿ ಪರಿಹಾರ ಪಡೆಯುವ ಸಲುವಾಗಿ ಸರ್ಕಾರವು ಕರ್ನಾಟಕ ಭೂಕಂದಾಯ ಅಧಿನಿಯಮ 1964 ಮತ್ತು ನಿಯಮಾವಳಿಗಳು 1966 ರಲ್ಲಿ 1ನೇ ಮತ್ತು 2ನೇ ಮೇಲ್ಮನವಿ ಹಾಗೂ ಪುನರೀಕ್ಷಣಾ ಅರ್ಜಿ ದಾಖಲಿಸಲು ಅವಕಾಶ ಕಲ್ಪಿಸಿದೆ.<br><br>ಅಳತೆ ಸಂದರ್ಭದಲ್ಲಿ ಆಗಿರುವ ತಪ್ಪು (ಮೋಜಿಣಿ ತಪ್ಪು)ಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ |

| | | |
|---|---|---|
| | | ನಿರ್ದಿಷ್ಟವಾದ ದೂರುಗಳು ಸ್ವೀಕೃತವಾದ ತಕ್ಷಣ ಸಂಬಂಧಿಸಿದ ಭೂದಾಖಲೆಗಳ ಜಂಟಿ ನಿರ್ದೇಶಕರು/ ಭೂದಾಖಲೆಗಳ ಉಪ ನಿರ್ದೇಶಕರುಗಳಿಂದ ತನಿಖೆ ಮಾಡಿ ಇಲಾಖಾ ವಿಚಾರಣೆ ನಡೆಸಿ ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ KCSR ಹಾಗೂ CCA ನಿಯಮಗಳಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಅದರಂತೆ ರಾಜ್ಯದಲ್ಲಿ ಭೂಮಾಪಕರು, ತಪಾಸಕರು ಮತ್ತು ಭೂದಾಖಲೆಗಳ ಸಹಾಯಕ ನಿರ್ದೇಶಕರುಗಳ ವಿರುದ್ಧ ಒಟ್ಟು 39 ಪ್ರಕರಣಗಳು ಕಂಡು ಬಂದಿದ್ದು, ಈ ಪೈಕಿ 05 ಪ್ರಕರಣಗಳಲ್ಲಿ ವಿಚಾರಣೆ ನಡೆಸಿ ಅಂತಿಮ ಆದೇಶ ಹೊರಡಿಸಲಾಗಿದ್ದು, ಇನ್ನು 34 ಪ್ರಕರಣಗಳಲ್ಲಿ ವಿಚಾರಣೆಯು ವಿವಿಧ ಹಂತದಲ್ಲಿ ಬಾಕಿಯಿರುತ್ತವೆ. |
| (ಆ) | 2025-26 ನೇ ಸಾಲಿನಲ್ಲಿ ಬೆಳಗಾವಿ, ಬೀದರ್, ಕಲಬುರಗಿ ಜಿಲ್ಲೆಗಳಲ್ಲಿ ಭೂದಾಖಲೆ ತಿದ್ದುಪಡಿ ಬಾಕಿ ಪ್ರಕರಣಗಳ ಸಂಖ್ಯೆ ಎಷ್ಟು; | 2025-26ನೇ ಸಾಲಿನ ಫೆಬ್ರುವರಿ-2026ರ ಅಂತ್ಯಕ್ಕೆ ಕರ್ನಾಟಕ ಭೂಕಂದಾಯ ನಿಯಮಾವಳಿಗಳು, 1966 ರ ನಿಯಮ 36(1) ರಡಿ ಭೂದಾಖಲೆಗಳ ತಿದ್ದುಪಡಿಗಾಗಿ ಬೆಳಗಾವಿ ಜಿಲ್ಲೆಯಲ್ಲಿ ಯಾವುದೂ ಬಾಕಿ ಇರುವುದಿಲ್ಲ. ಬೀದರ್ ಜಿಲ್ಲೆಯಲ್ಲಿ 25 ಹಾಗೂ ಕಲಬುರಗಿ ಜಿಲ್ಲೆಯಲ್ಲಿ 59 ಪ್ರಕರಣಗಳು ಬಾಕಿಯಿರುತ್ತವೆ. |
| (ಇ) | ಉತ್ತರ ಕರ್ನಾಟಕಕ್ಕೆ ವಿಶೇಷ ಭೂ ಸರ್ವೆ ಯೋಜನೆ ಘೋಷಿಸುವ ಯೋಜನೆ ಇದೆಯೇ? | ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ: ಕಂಇ **91** ಎಸ್ ಎಸ್ ಸಿ **2026**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು